**<u>ದಿ : 29-08-2022 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಜಿಪಿ.ಎಸ್ ವಕೀಲರಿಂದ</u> :**

ನಾನು ಆರನೇ ತರಗತಿಯವರೆಗೆ ಓದಿದ್ದೇನೆ. ನನ್ನ ಮನೆ ಗೋಳಿಹೊಳೆ ಗ್ರಾಮದ ಯಲ್ಲೂರಿನಲ್ಲಿ ಇದೆ. ಅಪಘಾತವಾದ ಸ್ಥಳವು ಗೋಳಿಹೊಳೆಯಲ್ಲಿ ಹೆಲಿಪ್ಯಾಡ್ ಇದೆ. ಸದರಿ ರಸ್ತೆ ಯಡ್ತಾರೆಯಿಂದ ಕೊಲ್ಲೂರಿಗೆ ಹೋಗುತ್ತದೆ. ಅಲ್ಲಿಂದ ನಮ್ಮ ಮನೆ ಮೂರರಿಂದ ನಾಲ್ಕು ಕಿ.ಮೀ ದೂರದಲ್ಲಿದೆ. ಆ ದಿನ ನಾನು ಗಾರೆ ಮತ್ತು ಕೂಲಿ ಕೆಲಸಕ್ಕೆ ಹೋಗುತ್ತಿದ್ದೆ. ಅಪಘಾತವಾದಾಗ 12.30 ಗಂಟೆ ಆಗಿತ್ತು. ನಾನು ಶೇಖರ ಶೆಟ್ಟಿಯವರ ಕೆಲಸ ಪೂರೈಸಿ ಅತ್ತೆ ಮನೆಗೆ ನಡೆದುಕೊಂಡು ಕೊಲ್ಲೂರು ಕಡೆಯಿಂದ ಬೈಂದೂರು ಕಡೆಗೆ ಹೋಗುತ್ತಿದ್ದೆ. ಸದರಿ ರಸ್ತೆ ಪೂರ್ವದಿಂದ ಪಶ್ಚಿಮಕ್ಕೆ ಇದೆ. ನಮ್ಮ ಅತ್ತೆಯ ಮನೆ ರಸ್ತೆಯಿಂದ ಉತ್ತರಕ್ಕೆ ಇದೆ. ಶೇಖರ ಶೆಟ್ಟಿಯವರ ಮನೆ ಉತ್ತರಕ್ಕೆ ಇದೆ. ಸದರಿ ರಸ್ತೆಯು ಎರಡು ವಾಹನಗಳು ಸಾಗುವಷ್ಟು ಅಗಲ ಇದೆ. ಅಪಘಾತವಾಗಿ ಬಿದ್ದ ಸ್ಥಳದಿಂದ ದಕ್ಷಿಣದ ಅಂಚಿಗೆ ಇಪ್ಪತ್ತು ಅಡಿ ಇರಬಹುದು.

2) ಅಪಘಾತವಾದ ಬಗ್ಗೆ ನನ್ನ ಭಾವ ದೂರು ನೀಡಿರುತ್ತಾರೆ. ಅಪಘಾತವನ್ನು ನನ್ನ ಭಾವ ನೋಡಿದರೋ ಇಲ್ಲವೋ ನನಗೆ ಗೊತ್ತಿಲ್ಲ. ಯಾರು ದೂರವಾಣಿ ಮಾಡಿ ಅವರು ಬಂದಿರುತ್ತಾರೆ. ಅಪಘಾತವಾದ ಸ್ಥಳವನ್ನು ನನ್ನ ಭಾವನೇ ತೋರಿಸಿರುತ್ತಾರೆ. ಪೊಲೀಸ್ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಪೊಲೀಸರು ತಯಾರು ಮಾಡಿದ ಕರಡು ನಕಾಶೆಯನ್ನು ಈಗ ನೋಡುತ್ತಿದ್ದೆ. ಅದು ಸರಿಯಿದೆ. ಆದ್ದರಿಂದ ಅದನ್ನು **ನಿ.ಆರ್ - 1** ಎಂದು ಗುರುತಿಸಲಾಯಿತು. ನಾನು ರಸ್ತೆಯನ್ನು ನೋಡದೆ ದಾಟುತ್ತಿದ್ದಾಗ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಆ ದಿನ ಮದ್ಯಪಾನ ಮಾಡಿ ಎರಡುಕಡೆಯಿಂದ ಬರುವ ವಾಹನಗಳು ಗೋಚರಿಸಿದೆ ಇರುವುದರಿಂದ ಅಪಘಾತಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

3) ಅಪಘಾತದ ನಂತರ ನನ್ನ ಭಾವ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಮೊದಲ ಬಾರಿಗೆ ಮೂರು ದಿನ ಆಸ್ಪತ್ರೆಯಲ್ಲಿ ಇದ್ದೆನು. ಆ ಸಂದರ್ಭದಲ್ಲಿ ನನ್ನ ಬಲಗಾಲಿಗೆ ಶಸ್ತ್ರ

ಚಿಕಿತ್ಸೆ ಮಾಡಿರುತ್ತಾರೆ. ನಂತರ ನಾನು ಆಸ್ಪತ್ರೆಗೆ ದಾಖಲಾದಾಗ 2020 ರಲ್ಲಿ ಒಳಸಾಧನ ತೆಗೆದಿರುತ್ತಾರೆ. ನಂತರ ನಾನು ಹದಿನೈದರಿಂದ ಇಪ್ಪತ್ತು ಬಾರಿ ಆಸ್ಪತ್ರೆಗೆ ಹೋಗಿದ್ದೇನೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಕೊನೆಯ ಬಾರಿಗೆ ಆಸ್ಪತ್ರೆಗೆ ಫೆಬ್ರವರಿ 2022 ರಲ್ಲಿ ಹೋಗಿದ್ದೇನೆ. ಮಾತ್ರೆ ಮತ್ತು ತೈಲ ಕೊಟ್ಟಿರುತ್ತಾರೆ. ಆ ಸಂದರ್ಭದಲ್ಲಿ ಯಾವುದೇ ಎಕ್ಸರೇ ಮಾಡಿರುವುದಿಲ್ಲ. ಒಳಸಾಧನ ತೆಗೆದ ಮೇಲೆ ಯಾವುದೇ ಚಿಕಿತ್ಸೆಯ ಅವಶ್ಯಕತೆ ಇಲ್ಲ ಎಂದರೆ ಸಾಕ್ಷಿಯು ಮೊದಲಿನಂತೆ ನಡೆಯಲು ಆಗುವುದಿಲ್ಲ, ನೋವಿದೆ ಎನ್ನುತ್ತಾರೆ. ಆಸ್ಪತ್ರೆಯವರು ನೀಡಿದ ಬಿಲ್ಲುಗಳನ್ನು ನಾನು ಹಾಜರುಪಡಿಸಿದ್ದೇನೆ. ಈಗ ನೋವು ಬಂದಲ್ಲಿ ತೈಲ ಹಚ್ಚುತ್ತೇನೆ.

4) ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ಆದರೆ ವೈದ್ಯರು ಯಾವುದೇ ಕೆಲಸ ಮಾಡದಂತೆ ಸೂಚಿಸಿಲ್ಲ. ಆಸ್ಪತ್ರೆಗೆ ಹೋಗುವಾಗ ನಾನು ಯಾವುದೇ ಬಾಡಿಗೆ ವಾಹನ ಉಪಯೋಗಿಸಿದ್ದೇನೆ, ಆದರೆ ಆ ಬಗ್ಗೆ ರಶೀದಿ ಇಲ್ಲ. ನನಗೆ ತಿಂಗಳಿಗೆ ಇಪ್ಪತ್ತು ಸಾವಿರ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿವಷ್ಟು ಹಣ ಪೌಷ್ಟಿಕ ಆಹಾರಕ್ಕೆ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೂ ಮುಂಚೆ ಹೇಗೆದ್ದೇನೋ ಹಾಗೇ ಇದ್ದೇನೆ ಎಂದರೆ ಸರಿಯಲ್ಲ. ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ಬಲಗಾಲು ವಿಕಾರತೆ ಹೊಂದಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ** : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಸದಸ್ಯರು, ಹೆಚ್ಚುವರಿ ಮೋಟಾರು ವಾಹನ**
**ಅಪಘಾತ ಪರಿಹಾರ ಮಂಡಳಿ, ಕುಂದಾಪುರ**